ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE 29/3/21

# ವೈಯಕ್ತಿಕ ಮಟ್ಟಕ್ಕೆ ಇಳಿದ ರಾಜ್ಯ ಸಿಡಿ ರಾಜಕಾರಣ

ಬೆಂಗಳೂರು: ರಾಜ್ಯದಲ್ಲಿ ಕಳೆದ 26 ದಿನಗಳಿಂದ ಸದ್ದು ಮಾಡುತ್ತಿರುವ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಸಿಡಿ ಪ್ರಕರಣದ ಕೆಸರೆರಚಾಟ ಈಗ ತೀರಾ ವೈಯಕ್ತಿಕ ಮಟ್ಟಕ್ಕೆ ಇಳಿದಿದೆ.

ರಾಷ್ಟ್ರಮಟ್ಟದಲ್ಲೇ ಹೆಸರಾಗಿದ್ದ ಕರ್ನಾಟಕದ ಮೌಲ್ಯಯುತ ರಾಜಕಾರಣ, ಈಗ ತೀರಾ ವೈಯಕ್ತಿಕ ಸಿಡಿ, ಇವುಗಳ ಮಧ್ಯೆ ದಾಳವಾಗಿರುವಮಹಿಳೆ,'ಅನಿವಾರ್ಯತೆ'ಗೆ ಸಿಲುಕಿರುವ ಆಕೆಯ ಪೋಷಕರು, ಹೀಗೆ ಪ್ರತಿದಿನ ರಾಡಿ ಎಬ್ಬಿಸುತ್ತಿರುವ ಘಟನೆಗಳು ರಾಜ್ಯದ ಮಟ್ಟಿಗೆ ತೀರಾ ಅನುಚಿತ ಘಟನೆಗಳು. ಸಚಿವರು, ಜನ ಪ್ರತಿನಿಧಿಗಳ ಇಂತಹ ಘಟನೆಗಳು, ಹಾಗೂ ಅವರನ್ನು ಬೆನ್ನತ್ತುವ ಹನಿ ಟ್ರಾಪ್ ಮಂದಿ, ಇವುಗಳನ್ನೆಲ್ಲ ನೋಡಿದರೆ, ರಾಜ್ಯದ ಘನತೆ ಮತ್ತು ನೈತಿಕ ರಾಜಕಾರಣ ಎರಡೂ ಮಣ್ಣು ಪಾಲಾಗುವ ಮುನ್ಸೂಚನೆಗಳು ದಟ್ಟವಾಗಿವೆ ಎಂಬುದು ಜನಾಭಿಪ್ರಾಯವಾಗಿದೆ. ಈ ಬಗ್ಗೆ ರಾಜಕೀಯ ಕ್ಷೇತ್ರದ ಗಣ್ಯರು ಏನನ್ನುತ್ತಾರೆ ಎಂಬ ಬಗ್ಗೆ ಉದಯವಾಣಿಯಿಂದ ರಾಜಕೀಯ ಗಣ್ಯರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ.

## ಯಾರೂ ಶತ್ರುಗಳಲ್ಲ



ಕರ್ನಾಟಕ ಯಾವತ್ತೂ ಸೌಜನ್ಯ, ಸಾಂಸ್ಕೃತಿಕ ಮತ್ತು ಮಾದರಿ ರಾಜಕಾರಣಕ್ಕೆ ಹೆಸರುವಾಸಿ. ಇಲ್ಲಿ ರಾಜಕಾರಣಕ್ಕೂ, ವ್ಯಕ್ತಿಗತ ಸಂಬಂಧಗಳಿಗೆ ಯಾವತ್ತೂ ಧಕ್ಕೆ ಬಂದಿರಲಿಲ್ಲ, ರಾಜಕಾರಣದಲ್ಲಿ ಬದ್ಧ ವೈರಿಗಳಾಗಿದ್ದರೂ, ವೈಯಕ್ತಿಕವಾಗಿ ಮತ್ತು ಸಾಮಾಜಿಕವಾಗಿ ಒಟ್ಟಿಗೆ ಸೇರಿ ಚರ್ಚಿಸುತ್ತಿದ್ದ ಆರೋಗ್ಯಕರ ವಾತಾವರ ಮೊದಲಿಂದಲೂ ಇತ್ತು. ದೇವರಾಜು ಅರಸು-ದೇವೇಗೌಡರು, ರಾಮಕೃಷ್ಣ ಹೆಗಡೆ-ಬಂಗಾರಪ್ಪ, ಮಲ್ಲಿಕಾರ್ಜುನ ಖರ್ಗೆ-ಜೆ. ಎಚ್. ಪಟೇಲ್, ಸಿದ್ದರಾಮಯ್ಯ-ಬಿ.ಎಸ್. ಯಡಿಯೂರಪ್ಪ ಅವರ ವೈಯಕ್ತಿಕ ಸಂಬಂಧಗಳನ್ನು ನಾವು ನೋಡಬಹುದು. ನಾವೆಲ್ಲರೂ ರಾಜಕೀಯ ಎದುರಾಳಿಗಳೇ ಹೊರತು ಶತ್ರುಗಳಲ್ಲ, ಖಾಸಗಿ ಅಥವಾ ವ್ಯಕ್ತಿಗತ ಬದುಕನ್ನು ರಾಜಕೀಯಕ್ಕೆ ಎಳೆದು ತರುವುದು ಒಳ್ಳೆಯ ಬೆಳವಣಿಗೆ ಅಲ್ಲ. ಆದರೆ, ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಇದು ಹೆಚ್ಚಾಗಿದೆ. ಯಾವುದೇ ಪಕ್ಷದವರು ಮಾಡಲಿ ಅವರನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಬೇಕಾಗುತ್ತದೆ. ಇಂತಹ ಬೆಳವಣಿಗೆ ರಾಜಕಾರಣದ ಮೇಲೆ ದೂರಗಾಮಿ ಪರಿಣಾಮಗಳನ್ನು ಬೀರುತ್ತದೆ. ಬುದ್ಧಿ ಹೇಳಿ ತಿದ್ದುವ ಎತ್ತರದ ನಾಯಕತ್ವ ಯಾವ ಪಕ್ಷದಲ್ಲೂ ಉಳಿದಿಲ್ಲ, ರಾಜ್ಯ ರಾಜಕಾರಣದ ಮಟ್ಟಿಗೆ ಇದೊಂದು ಸವಾಲಿನ ಸಂದರ್ಭ. ಇದರಿಂದ ರಾಜ್ಯ ರಾಜಕಾರಣ ಹೊರಬರಲಿದೆ ಎಂಬ ವಿಶ್ವಾಸ ನನಗಿದೆ.

• ಬಿ.ಎಲ್. ಶಂಕರ್, ವಿಧಾನಪರಿಷತ್ ಮಾಜಿ ಸಭಾಪತಿ

## ಇದೆಲ್ಲ ವೈಯಕ್ತಿಕ ವಿಷಯ



ಇದೇನು ರಾಜಕೀಯ ಬೆಳವಣಿಗೆ ಅಲ್ಲ, ದರಿದ್ರದ ಮತ್ತು ಬೇಡದ ಕೆಲಸಕ್ಕೆ ಇಷ್ಟೊಂದು ಚರ್ಚೆ, ಅಷ್ಟೊಂದು ಪ್ರಚಾರ ಸಿಗುತ್ತಿರುವುದು ನೋವಿನ ಸಂಗತಿ. ಯಾರದ್ದೋ ಅರ್ಥವಿಲ್ಲದ ಸಂಗತಿಗಳನ್ನು ಇಟ್ಟುಕೊಂಡು ಚಾರಿತ್ರಹರಣ ಮಾಡುವುದು. ಇದಕ್ಕೂ ರಾಜಕೀಯಕ್ಕೂ ಏನೂ ಸಂಬಂಧ ಇಲ್ಲ, ಇದೆಲ್ಲ ವೈಯಕ್ತಿಕ ವಿಷಯ. ಇಂತಹ ಘಟನೆ ನಡೆಯಬಾರದಿತ್ತು. ನಡೆದು ಹೋಗಿದೆ. ಅದನ್ನು ಅಷ್ಟಕ್ಕೆ ಬಿಟ್ಟುಬಿಡಬೇಕು. ಬೇಡದ ಘಟನೆಗೆ ಸಿಗಬಾರದ ಪ್ರಚಾರ ಸಿಗುತ್ತಿದೆ. ನಾವೆಲ್ಲರೂ ನಮ್ಮ ನಮ್ಮ ಗೌರವ ಕಾಪಾಡಿಕೊಳ್ಳಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯ ಮತ್ತು ಜವಾಬ್ದಾರಿ. ಅದರಲ್ಲೂ ಅಧಿಕಾರದಲ್ಲಿರುವವರು ಸ್ವಲ್ಪ ಎಚ್ಚರಿಕೆಯಿಂದ ಇರಬೇಕು. ದಿನಕ್ಕೊಂದು ಬೆಳವಣಿಗೆಗಳು ನಡೆಯುತ್ತಿರುವುದು ಕಣ್ಣಾಮುಚ್ಚಾಲೆ ಆಟದಂತಾಗಿದೆ. ನೈತಿಕತೆಯ ಪ್ರಶ್ನೆ ಬಂದಾಗ ಅದನ್ನು ಸಮಾಜದ ಮುಂದೆ ಒಮ್ಮೆ ಕೇಳಿ ಬಿಟ್ಟುಬಿಡಬೇಕು. ಅದನ್ನೇ ಎಳೆದುಕೊಂಡು ಹೋಗಬಾರದು.

• ಡಿ.ಎಚ್. ಶಂಕರಮೂರ್ತಿ, ವಿಧಾನಪರಿಷತ್ ಮಾಜಿ ಸಭಾಪತಿ.



## ರಾಜಕಾರಣಿಗಳೇ ಕಾರಣ

ಸಿಡಿ ಪ್ರಕರಣದಲ್ಲಿ ರಾಜ್ಯದ ಮಾನ-ಮರ್ಯಾದೆ ಹರಾಜು ಆಗಿರುವುದಕ್ಕೆ ನೇರವಾಗಿ ರಾಜಕಾರಣಿಗಳೇ ಕಾರಣ. ಜಾರಕಿಹೊಳಿ ಸಿಡಿ ವೃತ್ತಾಂತ ಮತ್ತು ಅದಕ್ಕೆ ಸಂಬಂಧಿಸಿದಂತೆ ಡಿ.ಕೆ.ಶಿ ಸುತ್ತಲಿನ ಬೆಳವಣಿಗೆಗಳು ದೊಡ್ಡ ಪ್ರಮಾಣದಲ್ಲಿ ಆಗುತ್ತಿರುವುದು ನೈತಿಕ ಅಧಃಪತನ ಹಾಗೂ ರಾಜಕೀಯ ಅವನತಿಗೆ ಸಾಕ್ಷಿ. ರಾಜ್ಯದ, ಸದನದ ಘನತೆ ಮತ್ತು ಗೌರವ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ. ಎಸ್ಐಟಿ ರಚನೆ ಸೇರಿ ಪ್ರಕರಣವನ್ನು ನಿರ್ವಹಿಸುವ ವಿಚಾರದಲ್ಲಿ ಆಗಿರುವ ತೊಡರುಗಳೇ ವಿಷಯ ಇಷ್ಟೊಂದು ದೊಡ್ಡದಾಗಲು ಕಾರಣ.

• ಎಂ.ಸಿ. ನಾಣಯ್ಯ, ವಿಧಾನಪರಿಷತ್ ಮಾಜಿ ಸದಸ್ಯ.

## ಒಳ್ಳೆಯ ಬೆಳವಣಿಗೆ ಅಲ್ಲ



ಈ ತರಹದ ಘಟನೆಗಳು ರಾಜ್ಯದ ಮಹತ್ವ ಮತ್ತು ಘನತೆಯ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ ಅಲ್ಲ, ತೀರಾ ವ್ಯಕ್ತಿಗತ ವಿಷಯಗಳಿಗೆ ಈ ಪ್ರಕರಣ ಹೋಗುತ್ತಿರುವಾಗ ಸರ್ಕಾರದ ಜವಾಬ್ದಾರಿ ದೊಡ್ಡದಾಗಿದೆ. ವಿಷಯಾಂತರ ಮಾಡುವುದು ಸರಿಯಲ್ಲ, ಈ ಘಟನೆ ರಾಷ್ಟ್ರ-ರಾಜ್ಯದ ಗಮನ ಸೆಳೆದಿದೆ. ರಮೇಶ್ ಜಾರಕಿಹೊಳಿ ರಾಜೀನಾಮೆ ಕೊಟ್ಟಿರಬಹುದು. ವಿಷಯ ಅಲ್ಲಿಗೆ ಮುಗಿದಿಲ್ಲ, ಇನ್ನೊಬ್ಬರ ಮೇಲೆ ವರ್ಗಾಯಿಸುವ ಪ್ರಯತ್ನಗಳು ನಡೆದಿವೆ. ತನಿಖೆ ಆಗಿ ಸತ್ಯ ಹೊರಬಂದು ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ಮಹಿಳೆಯ ಘನತೆಯೂ ವಿಚಾರವೂ ಇರುವುದರಿಂದ ಯುವತಿಯ ಹೇಳಿಕೆ ಮುಖ್ಯವಾಗುತ್ತದೆ. ಗೃಹ ಮಂತ್ರಿಗಳು ದಿನಕ್ಕೊಂದು ಬಹಿರಂಗ ಹೇಳಿಕೆ ನೀಡುವುದರಿಂದ ತನಿಖೆಯ ಮೇಲೆ ಪ್ರಭಾವ ಬೀರಿದಂತಾಗುತ್ತದೆ, ಸರ್ಕಾರ ಮತ್ತು ಶಾಸಕಾಂಗದ ಘನತೆಯ ಪ್ರಶ್ನೆ ಇರುವುದರಿಂದ ಮುಖ್ಯಮಂತ್ರಿಗಳು ಜವಾಬ್ದಾರಿಯಿಂದ ದೂರು ಹೋಗಲು ಆಗುವುದಿಲ್ಲ, ಸರ್ಕಾರ, ಶಾಸಕರು ಮತ್ತು ಶಾಸಕಾಂಗದ ಬಗ್ಗೆ ಅಸಹ್ಯ ಹುಟ್ಟಿಸುವಂತಹ ಇಂತಹ ಬೆಳವಣಿಗೆ ಒಳ್ಳೆಯದಲ್ಲ.

• ವಿ.ಆರ್. ಸುದರ್ಶನ್, ವಿಧಾನಪರಿಷತ್ ಮಾಜಿ ಸಭಾಪತಿ